ಬಂದು ಆಟವಾಡಿಕೊಂಡಿದ್ದ ಚಂದನಾಳನ್ನು ಕರೆದುಕೊಂಡು ಬಂದಳು.

ರಾತ್ರಿಯೆಲ್ಲಾ ಸರಿಯಾಗಿ ನಿದ್ದೆಯಿಲ್ಲದೆ ಹೊರಳಾಡಿದಳು. ಶಶಿಧರನೊಂದಿಗೆ ಕಳೆದ ಆ ಮಧುರ ದಿನಗಳ ನೆನಪು, ನಂತರದ ಅಸಹನೆ, ಅನುಮಾನದ ಕಾರಣ ನಿತ್ಯವೂ ಏಳುತ್ತಿದ್ದ ಜಗಳ, ನೆನಪುಗಳನ್ನು ಹೊರಹಾಕಲು ಎಷ್ಟೇ ಪ್ರಯತ್ನ ಪಟ್ಟರೂ ಅವು ತಲೆಯಿಂದಾಚೆ ಹೋಗಲಿಲ್ಲ. ಎಂಟು ವರ್ಷಗಳ ಹಿಂದೆ ದಾವಣಗೆರೆಯಲ್ಲಿ ಖಾಸಗಿ ಸಂಸ್ಥೆಯಲ್ಲಿ ಎಂಜಿನಿಯರ್ ಆಗಿದ್ದ ಶಶಿಧರನ ಪರಿಚಯವಾಗಿದ್ದು ಸಂಜನಾಳ ಸ್ನೇಹಿತೆ ಮನೆಯ ಕಾರ್ಯಕ್ರಮವೊಂದರಲ್ಲಿ. ತನ್ನ ಅಣ್ಣನ ಸಹೋದ್ಯೋಗಿ ಅಂತ ಪರಿಚಯಿಸಿದ್ದಳು ಗೆಳತಿ. ನಂತರ ಎರಡು ಮೂರು ಬಾರಿ ಪರಸ್ಪರ ಮುಖಾಮುಖಿಯಾಗುವ ಸಂದರ್ಭ ಬಂದಿತ್ತು. ಪರಿಚಯ ಸ್ನೇಹಕ್ಕೆ ತಿರುಗಿತು. ಸಂಪರ್ಕಕ್ಕೆ ಮೊಬೈಲ್ ನಂಬರುಗಳು ವಿನಿಮಯವಾದವು. ಸಂದೇಶಗಳು ಇಬ್ಬರ ಮೊಬೈಲ್‌ಗಳ ನಡುವೆ ಹರಿದಾಡಿದವು. ನಂತರ ನೇರ ನೇರ ಮಾತುಗಳು ಶುರುವಾದವು. ಸಲುಗೆ ಬೆಳೆಯಿತು. ಪ್ರೀತಿಯ ಬಳ್ಳಿ ಹಬ್ಬಿಕೊಂಡಿತ್ತು. ಸಂಜನಾ ಪದವಿ ಮುಗಿಸಿದ ಮೇಲೆ ಇಬ್ಬರೂ ಪ್ರೀತಿ ಪ್ರೇಮ ಎಂದು ಕಾಲ ಕಳೆಯತೊಡಗಿದರು. ಹದಿನೈದು ದಿನಕ್ಕೊಮ್ಮೆ ತನ್ನೂರು ಹೊಳೆನರಸೀಪುರಕ್ಕೆ ಹೋಗಿ ಬರುತ್ತಿದ್ದ ಶಶಿಧರ ಸಂಜನಾಳ ಪರಿಚಯವಾದ ಮೇಲೆ ತಿಂಗಳಿಗೊಮ್ಮೆ ಅಥವಾ ಎರಡು ತಿಂಗಳಿಗೊಮ್ಮೆ ಹೋಗಿ ಬರುವಂತಾದ. ಹೀಗೊಮ್ಮೆ ಹೋಗಿಬಂದಾಗ ಜೊತೆಯಲ್ಲೇ ಸಂಜನಾಳಿಗೆ ಆಘಾತವಾಗುವಂತಹ ಸುದ್ದಿಯನ್ನೂ ತಂದ. ಮನೆಯಲ್ಲಿ ಅವನ ಮದುವೆಯ ಪ್ರಸ್ತಾಪ ಬಂದಿತ್ತು. ಅವನ ದೂರದ ಸಂಬಂಧದ ಹುಡುಗಿಯೊಬ್ಬಳನ್ನು ಶಶಿಧರನಿಗೆ ಮದುವೆ ಮಾಡಲು ತಯಾರಿ ನಡೆದಿತ್ತು.

ಶಶಿಧರ ಮತ್ತು ಸಂಜನಾ ಇಡೀ ದಿನ ತಮ್ಮ ಭವಿಷ್ಯದ ಬಗ್ಗೆ ಚರ್ಚೆ ನಡೆಸಿ ಒಂದು ನಿರ್ಧಾರಕ್ಕೆ ಬಂದು ತಮ್ಮ ತಮ್ಮ ಮನೆಗಳಲ್ಲಿ ತಮ್ಮ ವಿಷಯ ಪ್ರಸ್ತಾಪಿಸಿದರು. ಎರಡೂಕಡೆ ವಿರೋಧ ವ್ಯಕ್ತವಾಯಿತು. ಇಬ್ಬರೂ ಮನೆಬಿಟ್ಟು ಹೊರಬಂದು ರಿಜಿಸ್ಟರ್ ವಿವಾಹ ಮಾಡಿಕೊಂಡರು.

ದಾವಣಗೆರೆಯಲ್ಲೇ ಸಂಸಾರ ಹೂಡಿದರು. ಮೊದಲ ವರ್ಷ ಪ್ರೀತಿಯೇ ಉಸಿರು ಎಂಬಂತಿದ್ದರು. ಎರಡನೇ ವರ್ಷಕ್ಕೆ ಚಂದನಾ ಹುಟ್ಟಿದಳು. ಮಗಳ ಆರೈಕೆಯಲ್ಲಿ ಸಂಸಾರ ತೂಗುವಲ್ಲಿ ಸಂಜನಾಳ ಸಮಯ ಕಳೆದು ಹೋಗುತ್ತಿತ್ತು. ಶಶಿಧರನಿಗೆ ಸಂಜನಾ ತನ್ನನ್ನು ಅಸಡ್ಡೆ ಮಾಡುತ್ತಿದ್ದಾಳೆ, ಮೊದಲಿನಂತೆ ಪ್ರೀತಿ ತೋರಿಸುತ್ತಿಲ್ಲ ಎಂಬ ಭಾವನೆ ಮೂಡತೊಡಗಿತು. ಅದಕ್ಕೆ ಪ್ರತಿಯಾಗಿ ಅವಳ ಬಗ್ಗೆ ಅಸಹನೆ ತೋರತೊಡಗಿದ. ನಂತರದ ದಿನಗಳಲ್ಲಿ ಎತ್ತು ಏರಿಗೆಳೆದರೆ, ಕೋಣ ನೀರಿಗೆಳೆಯಿತು ಎಂಬಂತಾಯಿತು ಅವರ ಸಂಸಾರ. ಸಣ್ಣ ಪುಟ್ಟ ವಿಷಯಗಳಿಗೂ ವಾದ ವಿವಾದ ಉಂಟಾಗತೊಡಗಿತು. ಇಬ್ಬರ ನಡುವಿನ ಅಸಮಾಧಾನ, ಅಸಹಕಾರ ಮರವಾಗಿ ಬೆಳೆಯತೊಡಗಿತು. ವಾಗ್ವಾದಗಳು, ಜಗಳಗಳಾಗಿ ಪರಿವರ್ತನೆಯಾದವು.

ಹೆಜ್ಜೆ ಹೆಜ್ಜೆಗೂ ಸಂಜನಾಳಲ್ಲಿ ತಪ್ಪು ಹುಡುಕಿ ಜಗಳ ತೆಗೆಯತೊಡಗಿದ ಶಶಿಧರ. ಸಂಶಯದ ಪ್ರಾಣಿ, ಸಂಕುಚಿತ ಸ್ವಭಾವ. ಪದೇ ಪದೇ ಅವನೊಂದಿಗೆ ಸಂಘರ್ಷಕ್ಕೆ ಇಳಿಯಬೇಕಾಗಿತ್ತು. 'ನಿನ್ನನ್ನು ಪ್ರೀತಿಸಿ ತಪ್ಪುಮಾಡಿದೆ' ಎಂದ ಶಶಿಧರ. 'ನಿನ್ನನ್ನು ನಂಬಿ ಮದುವೆಯಾಗಿ ಮೋಸಹೋದೆ' ಎಂದಳು ಸಂಜನಾ. ಒಂದೇ ಮನೆಯಲ್ಲಿದ್ದರೂ ಒಬ್ಬರಿಗೊಬ್ಬರು ಮಾತಾಡಲಿಲ್ಲ. ಒಬ್ಬರ ಮುಖವನ್ನೊಬ್ಬರು ನೋಡಲಿಲ್ಲ. ಮಗಳು ಚಂದನಾಳ ಬಗ್ಗೆಯೂ ಅಸಡ್ಡೆ ತೋರಿಸಿದ ಶಶಿಧರ. ಹೀಗೆ ಒಂದು ತಿಂಗಳು ಕಳೆಯಿತು. ಒಂದು ಬೆಳಗ್ಗೆ ಸಂಜನಾ ಮತ್ತು ಮಗಳು ಏಳುವುದಕ್ಕೂ ಮುಂಚೆಯೇ ಶಶಿಧರ ಮನೆಬಿಟ್ಟು ಹೊರಟುಹೋದ – 'ನಿನ್ನೊಂದಿಗೆ